SRI RAMAKRISHNA HEGDE.—Sir, I move:

"That the Karnataka Entertainments Tax (Second Amendment) Bill, 1983 be passed"

MR. DEPUTY SPEAKER.—The question is:

"That the Karnataka Entertainments Tax (Second Amendment) Bill, 1983 be passed"

The motion was adopted and the Bill was passed.

P.M. 3-00

THE KARNATAKA TAX ON PROFESSIONS, TRADES, CALLINGS AND EMPLOYMENTS (AMENDMENT) BILL, 1983.

Motion to consider

SRI RAMAKRISHNA HEGDE (Chief Minister).—Sir, beg to move.

"That the Karnataka Tax on Proffessions, Trades, Callings and Employments (Amendment) Bill, 1983

The question was proposed

ಉಪಾಧ್ಯಕ್ಷರು—ಮಾನ್ಯ ಮಂತ್ರಿಯವರು ಈ ಅಮೆಂಡ್‌ಮೆಂಟ್ ಬಗ್ಗೆ ವಿವರಣೆ ಕೊಡಬಹುದು.

ಶ್ರೀ ರಾಮಕೃಷ್ಣ ಹೆಗಡೆ—ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಚಿಕ್ಕ ಅಮೆಂಡ್‌ಮೆಂಟ್ ಇದರಲ್ಲಿರತಕ್ಕದು ಇಷ್ಟೆ, ಹೋದವರ್ಷ ಓಟ್ ಆನ್ ಅಕೌಂಟ್ ಮೇಲೆ ಚರ್ಚೆಯಾದ ಸಂದರ್ಭದಲ್ಲಿ ಮಾನ್ಯ ಸದಸ್ಯರೊಬ್ಬರು ಒಂದು ಸೂಚನೆ ಮಾಡಿದರು. ಪ್ರೊಫೆಶನಲ್ ಟ್ಯಾಕ್ಸ್ ಹಾಕುವಾಗ, ಯಾರಿಗೆ ನಿರ್ದಿಷ್ಟವಾಗಿ ಸಂಬಳ ಬರುತ್ತದೆ ಅಂತಹವರಲ್ಲಿ ನಾಲ್ಕನೇ ದರ್ಜೆಯ ಸರ್ಕಾರಿ ನೌಕರರೂ ಇದ್ದಾರೆ. ಹೆಚ್ಚಾಗಿ ಪಬ್ಲಿಕ್ ಸೆಕ್ಟಾರ್‌ನಲ್ಲಿರತಕ್ಕವರು, ಕಾರ್ಖಾನೆ ನೌಕರರು ಇವರೆಲ್ಲರಿಗೂ ಇದರಿಂದ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಯಾರಿಗೆ ೧೫೦೦ ರೂಪಾಯಿಗಳವರೆಗೆ ತಿಂಗಳ ಸಂಬಳ ಬರುತ್ತದೆ ಅಂತಹವರಿಗೆ ಪ್ರೊಫೆಶನಲ್ ಟ್ಯಾಕ್ಸ್ ಕಡಿಮೆ ಮಾಡುತ್ತೇವೆಂದು ಹೇಳಿದ್ದೇವೆ. ಲೆಕ್ಕಹಾಕುವಾಗ ಅನೇಕ ತರಹದ ತಪ್ಪು ತಿಳುವಳಿಕೆಗಳಿಗೆ ಅವಕಾಶವಾಯಿತು. ಆದ್ದರಿಂದ ನಿರ್ದಿಷ್ಟವಾಗಿ ಯಾರಿಗೆ ತಿಂಗಳಿಗೆ ೧೫೦೦ ರೂಪಾಯಿಗಳಿಗಿಂತ ಹೆಚ್ಚು ಪರಮಾನವಿಲ್ಲವೋ ಅಂತಹವರಿಗೆ ಪ್ರೊಫೆಶನಲ್ ಟ್ಯಾಕ್ಸ್ ಹಾಕಬಾರದೆಂದು ಹೇಳುವುದು ಸರಿ. ಬೇಸಿಕ್ ಪೇ ಡಿ.ಎ. ಅಲೋಯೆನ್ಸಸ್ ಎಲ್ಲಾ ಸೇರಿದರೂ ಕೂಡ ತಿಂಗಳಿಗೆ ೧೫೦೦ ರೂಪಾಯಿಗಳಿಗಿಂತ ಹೆಚ್ಚು ಪರಮಾನವಿಲ್ಲವೋ ಅಂತಹವರಿಗೆ ಪ್ರೊಫೆಶನಲ್ ಟ್ಯಾಕ್ಸ್ ತೆಗೆಯಬೇಕೆಂದು ಹೇಳತಕ್ಕದ್ದು ಸರಿಯಾಗಿದೆ. ಆಮೇಲೆ ಮಾನ್ಯ ಎಂ.ಎಸ್. ನಾರಾಯಣರಾವ್‌ರವರ ಒಂದು ಸೂಚನೆ ಮಾಡಿದರು. ಅವರು ಕೂಡ ವಕೀಲರೆಲ್ಲರಿಗೂ ಸರಿಯಾದ ಪ್ರಾಕ್ಟೀಸ್ ಇಲ್ಲ ಈಗ ವಕೀಲರುಗಳಿಗೆ ಪ್ರಾಕ್ಟೀಸ್ ಪ್ರಾರಂಭ ಮಾಡಿದ ೭ ವರ್ಷಗಳವರೆಗೆ ಪ್ರೊಫೆಶನಲ್ ಟ್ಯಾಕ್ಸ್ ಎಕ್ಸಮ್‌ಷನ್ ಕೊಟ್ಟಿದ್ದಾರೆ. ೭ ವರ್ಷಗಳಲ್ಲಿಪ್ರಾಕ್ಟೀಸ್ ಪಿಕಪ್ ಆಗುವುದಿಲ್ಲ ಆದ್ದರಿಂದ ಕನಿಷ್ಟಪಕ್ಷ ೧೦ ವರ್ಷಗಳವರೆಗೆ ಪ್ರೊಫೆಶನಲ್ ಟ್ಯಾಕ್ಸ್ ಎಕ್ಸಮ್‌ಷನ್ ಕೊಡಬೇಕೆಂದು ಬಾರ್ ಅಸೋಸಿಯೇಷನ್‌ರವರ ಅಭಿಪ್ರಾಯ ವಿದೆಯೆಂದು ನಾರಾಯಣರಾವ್‌ರವರು ನನಗೆ ಹೇಳಿದರು. ಅನೇಕ ವಕೀಲರುಗಳು ಕೂಡ ಈವಿಚಾರವಾಗಿ ನನನ್ನು ಭೇಟಿಯಾಗಿದ್ದರು. ಈಗ ೭ ವರ್ಷಗಳಿಂದ ೧೦ ವರ್ಷಗಳಿಗೆ ಏರಿಸಿದ್ದೇವೆ. ಇದರಲ್ಲಿ ರಿಲೀಫ್ ಕೊಟ್ಟಿರತಕ್ಕದ್ದು ವೇಜ್ ಅರ್ನರ್ಸ್ ಅವರುಗಳಿಗೆ ತಿಂಗಳಿಗೆ ೧೫೦೦ ರೂಪಾಯಿ ಯಾರಿಗೆ ಸಂಬಳ ಬರುತ್ತದೆ ಅವರಿಗೆ ಪ್ರೊಫೆಶನಲ್ ಟ್ಯಾಕ್ಸ್ ಎಕ್ಸಮ್‌ಷನ್ ತೋರಿಸಿದ್ದೇವೆ. ಅದರ ಪ್ರಕಾರ ೪ ಲಕ್ಷದ ೧೬ಸಾವಿರ ಜನರಿಗೆ ಇದರಿಂದ ಲಾಭವಾಗುತ್ತದೆ. ಡೀಲರ್ಸ್ ೪೦ ಸಾವಿರ ರೂಪಾಯಿಗಳ ವರೆಗೆ ಟರ್ನ್‌ಓವರ್ ಇದ್ದರೆ ಅಂತಹವರಿಗೆ ಸೇಲ್ಸ್‌ಟ್ಯಾಕ್ಸ್ ಎಕ್ಸಮ್‌ಷನ್ ಮಾಡಿದ್ದೇವೆ. ಡೀಲರ್ಸ್‌ಗಳಿಗೂ ಇದನ್ನೆ ಅನುಸರಿಸುತ್ತೇವೆ. ಆದ್ದರಿಂದ ಇದನ್ನು ಮಾನ್ಯ ಸದಸ್ಯರು ತುಂಬಿದ ಹೃದಯದಿಂದ ಸ್ವಾಗತ ಮಾಡುತ್ತಾರೆಂದು ನಾನು ಆಶಯ ಮಾಡುತ್ತೇನೆ.

† ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಕೆಲವು ರಿಯಾಯಿತಿಗಳನ್ನು ಘೋಷಣೆ ಮಾಡಿದ್ದಾರೆ. ಮುಖ್ಯವಾಗಿ ಸಂಬಳ ಪಡೆಯಂತಕ್ಕ ನೌಕರರು ತಿಂಗಳಿಗೆ ೧೫೦೦ ರೂಪಾಯಿಗಳಿಗಿಂತ ಯಾರು ಕಡಿಮೆ ಸಂಬಳ ಪಡೆಯುತ್ತಾರೆ ಅಂತಹವರಿಗೆ ಪ್ರೊಫೆಶನಲ್ ಟ್ಯಾಕ್ಸನ್ನು ಸಂಪೂರ್ಣ ವಿನಾಯಿತಿ ಕೊಡಲಾಗಿದೆ. ಅದೇರೀತಿ ಡೀಲರ್ಸ್‌ಗಳಿಗೆ ಇದುವರೆಗೆ ೨೫ ಸಾವಿರ ಆದಾಯ ಇರತಕ್ಕವರಿಗೆ ಪ್ರೊಫೆಶನಲ್ ಟ್ಯಾಕ್ಸ್ ವಿನಾಯಿತಿ ಕೊಡಲಾಗಿತ್ತು. ಈಗ ೪೦ ಸಾವಿರ ರೂಪಾಯಿಗಳವರೆಗೆ ಏರಿಸಲಾಗಿದೆ. ಈಗ ಕೆಲವು ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ಮಾಡಿದ್ದಾರ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ. ಈಗ ಪ್ರಾಮುಖ್ಯವಾಗಿ ಮುಖ್ಯಮಂತ್ರಿಗಳು ಬಡ್ಜೆಟ್ ಅಧಿವೇಶನದ ವೇಳೆಯಲ್ಲಿ ಮಾಡಿದಂತಹ ಭಾಷಣದಲ್ಲಿ ೧೫೦೦ ರೂಪಾಯಿಗಳವರೆಗೆ ಸಂಬಳ ಪಡೆಯುವಂತಹ ವ್ಯಕ್ತಿಗಳು ಪ್ರೊಫೆಶನಲ್ ಟ್ಯಾಕ್ಸ್ ಕೊಡುವ ಅವಶ್ಯಕತೆಯಿಲ್ಲ ಎಂದು ಹೇಳಿದ್ದಾರೆ. ೧೫೦೦ ರೂಪಾಯಿ ತಿಂಗಳ ಆದಾಯ ಇರತಕ್ಕ ಪ್ರತಿಯೋಬ್ಬ ವ್ಯಕ್ತಿಯೂ ಪ್ರೊಫೆಶನಲ್ ಟ್ಯಾಕ್ಸ್ ಎಕ್ಸಮ್‌ಷನ್ ಸಿಗುತ್ತದೆಂದು ಕಂಡುಕೊಂಡಿದ್ದಾರೆ. ಈ ತಿದ್ದುಪಡಿಯಲ್ಲಿ ಅದರ ಬಗ್ಗೆ ಉಲ್ಲೇಖವಿಲ್ಲ. ಕೇವಲ ನಿಗದಿತ ಸಂಬಳ ಪಡೆಯುವಂತಹ ವ್ಯಕ್ತಿಗಳಿಗೆ ಮಾತ್ರ ಈ ವಿನಾಯಿತಿಯನ್ನು ಕೊಟ್ಟಿದ್ದಾರೆ. ಪ್ರಾಕ್ಟೀಸ್ ಮಾಡುತಕ್ಕ ವಕೀಲರುಗಳಿಗೆ ೭ ವರ್ಷಗಳವರೆಗೆ ಪ್ರೊಫೆಶನಲ್ ಟ್ಯಾಕ್ಸ್ ಎಸ್ಸೆಮ್‌ಷನ್ ಹಿಂದೆ ಇತ್ತು, ಈಗ ೧೦ ವರ್ಷಗಳ ವರೆಗೆ ಮುಂದುವರಿಸಿದ್ದೇವೆಂದು ಹೇಳುತ್ತಾರೆ, ಅದರ ಬಗ್ಗೆ ಉಲ್ಲೇಖ ಈ ತಿದ್ದುಪಡಿಯಲ್ಲಿ ಕಾಣುತ್ತಿಲ್ಲ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ೭ ವರ್ಷಗಳ ವರೆಗೆ ಇದ್ದ ರಿಯಾಯಿತಿಯನ್ನು ೧೦ ವರ್ಷಗಳ ವರೆಗೆ ಏರಿಸ ಬೇಕೆಂದು ಸೂಚನೆ ಬಂದಿತ್ತು ಅದನ್ನು ಒಪ್ಪಿದ್ದೇವೆಂದು ಹೇಳಿದರು, ಈ ತಿದ್ದುಪಡಿಯಲ್ಲಿ ಅದರ ಬಗ್ಗೆ ಉಲ್ಲೇಖವಿಲ್ಲ. ನಾನು ಇನ್ನು ಒಂದು ಹೆಜ್ಜೆ ಮುಂದಿಟ್ಟು ಹೇಳುವುದಾದರೆ ವಕೀಲಿ ವೃತ್ತಿ ಮಾಡತಕ್ಕವರಿಗೆ ಬಹತಕ್ಕ ಆದಾಯ ಒಂದು ರೀತಿಯಲ್ಲಿ ನಿಗದಿತ ಸಂಬಳ ಪಡೆಯುವವರಿಗಿಂತ ಜಾಸ್ತಿ ಇರುತ್ತದೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತಹ ವಿಚಾರಗಳಿಗೆ, ಮಾನ್ಯ ಕಾನೂನು ಮಂತ್ರಿಗಳು ಉತ್ತರ ಕೊಡುತ್ತಾರೆಂದು ಹೇಳಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತಾ ಹೇಳಿದರು. ಅದರ ಬಗ್ಗೆ ಈ ತಿದ್ದುಪಡಿಯಲ್ಲಿ ಉಲ್ಲೇಖವಿಲ್ಲ, ನಾನು ಹೇಳುವುದು ಇಷ್ಟೆ ಕೇವಲ ತಿಂಗಳ ಸಂಬಳ ಪಡೆಯುವವರನ್ನು ನೋಡಿಕೊಂಡು ರಿಯಾಯಿತಿ ಕೊಡುವುದಿಲ್ಲ, ಬೇರೆ ತರಹ ಆದಾಯವಿರುವವರನ್ನು ಸಹ ನೋಡಬೇಕು. ಡೀಲರ್ಸ್‌ಗಳ ಬಗ್ಗೆ ವಿಶೇಷವಾಗಿ ಉಲ್ಲೇಖವಿದೆ. ೨೫ ಸಾವಿರ ರೂಪಾಯಿಗಳಿಂದ ೪೦ ಸಾವಿರ ರೂಪಾಯಿಗಳವರೆಗೆ ಏರಿಸಿದ್ದಾರೆ. ಇಂಜಿನಿಯರ್‌ಗಳು ಇರಬಹುದು- ಡಾಕ್ಟರುಗಳು ಇರಬಹುದು ಸಣ್ಣ ಸಣ್ಣ ವೃತ್ತಿ ಮಾಡತಕ್ಕವರು ಇರಬಹುದು ಮೋಟಾರು ವಾಹನಗಳನ್ನು ಇಟ್ಟುಕೊಂಡಿರತಕ್ಕ ಮಾಲೀಕರು ಇರಬಹುದು ಹೀಗೆ ಇತರೆ ವೃತ್ತಿಮಾಡತಕ್ಕವರಿಂದ ಸಹ ತೆರಿಗೆ ವಸೂಲಿ ಮಾಡುತ್ತಿದ್ದಾರೆ. ಸ್ವಂತ ಉದ್ಯೋಗ ಮಾಡುವಂತಹವರಿಂದ, ಬಾಡಿಗೆಕಾರು ಓಡಿಸುವವರಿಂದ ಮತ್ತು ಆಟೋರಿಕ್ಷಾ ಓಡಿಸುವವರಿಂದ ಮತ್ತು ಮಾಲೀಕರಿಂದ ಪ್ರೊಫೆಶನಲ್ ಟ್ಯಾಕ್ಸ್ ವಸೂಲಿ ಮಾಡುತ್ತಿರತಕ್ಕದ್ದು ಕಾಣುತ್ತಿದೆ ಸ್ವಂತ ಉದ್ಯೋಗ ಮಾಡಿ ದುಡಿಮೆ ಮಾಡತಕ್ಕವರು ತಿಂಗಳಿಗೆ ೧೫೦೦ ರೂಪಾಯಿ ಆದಾಯ ಪಡೆಯತಕ್ಕವರಿಗೂ ಕೂಡ ಈಒಂದು ಎಕ್ಸಮ್‌ಷನ್ ಆಫ್ ಬೆನಿಫಿಟ್ ದೊರೆಯುವಂತೆ ಮಾಡ ಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ವಿಶೇಷವಾಗಿ ಈ ಕಾಯಿದೆ ತಿದ್ದುಪಡಿ ಬರುವುದಕ್ಕೆ ಹಿಂದೆ ಇದ್ದಂತಹ ಟ್ಯಾಕ್ಸ್‌ನ್ನು ವಸೂಲಿ ಮಾಡತಕ್ಕ ಅಧಿಕಾರಿಗಳು ಸರಿಯಾದ ವೇಳೆಗೆ ನೋಟೀಸನ್ನು ಕೊಡದೆ, ಮನಸ್ಸಿಗೆ ಬಂದ ರೀತಿಯಲ್ಲಿ ರಿಜಿಸ್ಟರ್ ಇಟ್ಟುಕೊಂಡು ಈಗ ವಸೂಲಿ ಮಾಡಲಿಕ್ಕೆ ಶುರು ಮಾಡಿದ್ದಾರೆ. ಟೈಮ್‌ಗೆ ಸರಿಯಾಗಿ ನೋಟೀಸ್ ಕೊಡದೆ, ಇಂಟರೆಸ್ಟ್ ಪೆನಾಲ್ಟಿ ಹಾಕಿ ಕೊಡಬೇಕಾದ ಹಣಕ್ಕಿಂತ ಮೂರು ನಾಲ್ಕು ಪಟ್ಟು ಹಣವನ್ನು ವಸೂಲಿ ಮಾಡಲಿಕ್ಕೆ ಹೊರಟಿದ್ದಾರೆ.

ಸ್ವಾಮಿ ಬಾಕಿ ಇರುವಂಥ ವೃತ್ತಿ ತೆರಿಗೆಯನ್ನು ಅಮೆಂಡ್‌ಮೆಂಟ್ ಮುಖಾಂತರವಾಗಿ ವಸೂಲಿ ಮಾಡುವುದಕ್ಕೆ ಅಧಿಕಾರವನ್ನು ಅಧಿಕಾರಿಗಳಿಗೆ ಸರ್ಕಾರ ಕೊಟ್ಟಿದ್ದಾರೆ ಒಂದು ವೇಳೆ ಈ ಬಿಲ್ ಜಾರಿಗೆ ಬಂದರೆ ಅಧಿಕಾರಿಗಳು ಉಗ್ರ ಕ್ರಮ ತೆಗೆದುಕೊಂಡು ಬಾಕಿ ಇರುವಂಥ ವೃತ್ತಿ ತೆರಿಗೆಯನ್ನು ವಸೂಲು ಮಾಡಲು ಪ್ರಯತ್ನಪಟ್ಟರೆ ನಾವು ಏನು ಮಾಡುವುದಕ್ಕೆ ಆಗುತ್ತದೆ? ಆದರೆ ಯಾವ ದಿನಾಂಕ ದಿಂದ ನಾವು ವೃತ್ತಿ ತೆರಿಗೆಯನ್ನು ವಿನಾಯಿತಿ ಮಾಡಿದ್ದೇವೆ ಎನ್ನುವ ಪದ ಇದರಲ್ಲಿ ಇಲ್ಲ. ಆದ್ದರಿಂದ

ತಾವು ಯಾವ ದಿನಾಂಕದಿಂದ ಎಂದು ಸ್ಪಷ್ಟವಾಗಿ ಹೇಳಿದರೆ ಒಳ್ಳೆಯದು. ಆ ರೀತಿಯು ಒಂದು ಸ್ಪಷ್ಟತೆ ಇದ್ದರೆ ಈ ರೀತಿಯ ಸಮಸ್ಯೆಗಳು ಉದ್ಭವಿಸಲು ಆಗುವುದಿಲ್ಲ. ಮತ್ತೆ ಯಾವುದೇ ರೀತಿಯ ಸಮಸ್ಯೆಗಳು ಇರುವುದಿಲ್ಲ. ಜನತಾ ಪಕ್ಷದವರು ಚುನಾವಣೆಯ ಪ್ರಣಾಳಿಕೆಯಲ್ಲಿ ಕೂಡ ಹೇಳಿದ್ದಾರೆ ಏನೆಂದರೆ ವೃತ್ತಿ ತೆರಿಗೆಯನ್ನು ರದ್ದು ಮಾಡುತ್ತೇವೆಂದು. ಆದರೆ ಆ ಬಗ್ಗೆ ಈ ಮನೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ಸ್ಪಷ್ಟ ಅಭಿಪ್ರಾಯಕ್ಕೆ ಬರಬೇಕೆಂದು ನಾನು ಸಲಹೆ ಮಾಡುತ್ತೇನೆ. ಕೊನೆಗೆ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ ಈ ವೃತ್ತಿ ತೆರಿಗೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ದೃಢವಾದಂಥ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ ೧೯೭೬ನೇ ಇಸವಿಯಲ್ಲಿ ಈ ವೃತ್ತಿ ತೆರಿಗೆಯನ್ನು ರದ್ದು ಮಾಡಬೇಕೆಂದು ಒಂದು ಮಸೂದೆ ತಂದಿದ್ದರೂ ಕೂಡ ಅದು ಇನ್ನೂ ಜಾರಿಗೆ ತಂದಿಲ್ಲ. ಆದರೆ ೧೯೭೬ನೇ ಇಸವಿಯಿಂದ ಇಲ್ಲಿಯವರೆಗೆ ಕರ್ನಾಟಕ ರಾಜ್ಯದ ಜನತೆ ವೃತ್ತಿ ತೆರಿಗೆ ರದ್ದತಿಯ ಬಗ್ಗೆ ಕನಸು ಕಾಣುತ್ತಿದ್ದಾರೆ ಆದರೆ ಇದುವರೆಗೂ ಕೂಡ ಸಂಪೂರ್ಣವಾಗಿ ವೃತ್ತಿ ತೆರಿಗೆ ರದ್ದಾಗಿಲ್ಲ ? ಇವತ್ತು ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲಿ ತೆರಿಗೆಯನ್ನು ವಸೂಲು ಮಾಡುತ್ತಿದ್ದಾರೆ ಅದರೆ ಅದರ ಬಗ್ಗೆ ಯಾರು ಇಷ್ಟೊಂದು ಆಸಕ್ತಿಯನ್ನು ವಹಿಸುತ್ತಿಲ್ಲ. ಆದರೆ ಈ ವೃತ್ತಿ ತೆರಿಗೆಯ ಬಗ್ಗೆ ಪ್ರತಿಯೊಬ್ಬರಿಗೂ ಕಳವಳವುಂಟಾಗಿದೆ. ಬೆಂಗಳೂರು ನಗರದಲ್ಲಿ ಈ ಬಗ್ಗೆ ಒಂದು ದೊಡ್ಡ ಹೋರಾಟವೇ ನಡೆದಿದೆ. ಅವರ ಹೋರಾಟದ ಹಿನ್ನೆಲೆ ಏನೆಂದರೆ ಈ ವೃತ್ತಿ ತೆರಿಗೆಯನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದು. ಈಗಿನ ವಿರೋಧ ಪಕ್ಷದ ನಾಯಕರು ಅಂದು ಮಾನ್ಯ ಹಣಕಾಸಿನ ಮಂತ್ರಿಗಳು ಆಗಿದ್ದರು. ಆಗ ಅವರು ಬೇಕಾಗಿದ್ದರೂ ಕೂಡ ಈ ವೃತ್ತಿ ತೆರಿಗೆಯನ್ನು ರದ್ದು ಮಾಡಬಹುದಾಗಿತ್ತು ಅವರು ಮಾಡಲಿಲ್ಲ. ಅವರು ಮಾಡದಿದ್ದ ಒಂದು ಹಿನ್ನೆಲೆಯಲ್ಲಿ ಜನತಾ ಪಕ್ಷಕ್ಕೆ ಬಹುಮತ ಬಂತು. ಆದ್ದರಿಂದ ಇವತ್ತು ಜನತಾ ಪಕ್ಷದ ಶಾಸಕರೆಲ್ಲರೂ ಒಮ್ಮನಿಸ್ಸಿನಿಂದ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ವೃತ್ತಿ ತೆರಿಗೆಯನ್ನು ರದ್ದು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಿಂದ ಸರ್ಕಾರಕ್ಕೆ ಎಷ್ಟು ಕೋಟಿ ರೂಪಾಯಿಗಳ ನಷ್ಟವಾಗಬಹುದು ಎನ್ನುವುದನ್ನು ಯೋಚನೆ ಮಾಡಿ ಬೇರೆ ರೀತಿಯಿಂದ ಆ ನಷ್ಟವನ್ನು ತುಂಬಿಕೊಳ್ಳುವುದಕ್ಕೆ ಮಾನ್ಯ ಮಂತ್ರಿಗಳು ವ್ಯವಸ್ಥೆ ಮಾಡಿಕೊಳ್ಳಬಹುದು. ಆದ್ದರಿಂದ ಸಂಪೂರ್ಣವಾಗಿ ವೃತ್ತಿ ತೆರಿಗೆಯನ್ನು ರದ್ದು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮತ್ತೆ ನಾನು ಒಂದು ಮಾತನ್ನು ಹೇಳಿದ್ದೆ. ಸುಪ್ರಿಂಕೋರ್ಟಿನಲ್ಲಿ ಕೂಡ ಈ ತೆರಿಗೆಯನ್ನು ಅನಾಹುತ ತೆರಿಗೆಯೆಂದು ಹೇಳಿದ್ದಾರೆ. ಆದರೆ ಯಾರಿಗೂ ಕೂಡ ತೆರಿಗೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲ. ಮತ್ತು ಸಾರ್ವಜನಿಕರಲ್ಲಿಯೂ ಕೂಡ ಒಳ್ಳೆಯ ಅಭಿಪ್ರಾಯ ಇಲ್ಲ. ಇವತ್ತು ನಾವು ಮುನಿಸಿಪಾಲಟಿಗಳಿಗೆ ಕೊಡುತ್ತಿರುವ ಟ್ಯಾಕ್ಸ್ ಬಹಳ ಕಡಿಮೆ. ಆದ್ದರಿಂದ ತಾವು ಬೇಕಾದರೆ ಮುನಿಸಿಪಾಲಟಿಗಳಿಗೆ ಹಚ್ಚು ತೆರಿಗೆಯನ್ನು ಹಾಕಿ ಬೇಡವೆಂದು ಹೇಳುವುದಿಲ್ಲ, ಮತ್ತೆ ಕಾರ್ಪೊರೇಷನ್‌ನಲ್ಲಿ ಅಕ್ಟ್ರಾಯ್ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಮತ್ತು ಈ ಬಗ್ಗೆ ಈಗಾಗಲೇ ಸಾಕಷ್ಟು ವಿಚಾರ ಸಂಕಿರಣ ನಡೆದಿದೆ. ಆದರೆ ಇವತ್ತು ಈ ಅಕ್ಟ್ರಾಯನ್ನು ಜಾರಿಗೆ ತಂದರೆ ವ್ಯಾಪಾರ ಸ್ಥರು ವಿರೋಧ ಮಾಡಬಹುದು. ಅವರಿಗೆ ಭಯಬಿದ್ದು ತಾವು ಅಕ್ಟ್ರಾಯ್ ಜಾರಿಗೆ ತರದಿದ್ದರೆ ಹೇಗೆ? ಆದ್ದರಿಂದ ತಾವು ಅಕ್ಟ್ರಾಯನ್ನು ಜಾರಿಗೆ ತರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) —ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಾಂದೇವ್‌ರವರು ಮಾತನಾಡಿ ನನಗೆ ಸ್ವಲ್ಪ ಸುಲಭ ಮಾಡಿಕೊಟ್ಟಿದ್ದಾರೆ. ಕಾರಣ ಏನೆಂದರೆ ಅವರು ಮಾತನಾಡಿದಂಥ ವಿಷಯವನ್ನೇ ನಾನು ಸಹ ಮಾತನಾಡಬೇಕೆಂದು ಇದ್ದೆ. ಮತ್ತು ಈ ವೃತ್ತಿ ತೆರಿಗೆಯನ್ನು ಸಂಪೂರ್ಣವಾಗಿ ರದ್ದು ಮಾಡುತ್ತಾರೆಂದು ನಾನು ತಿಳಿದುಕೊಂಡಿದೆ. ಈ ವೃತ್ತಿ ತೆರಿಗೆಯನ್ನು ರದ್ದು ಮಾಡಬೇಕೆಂದು ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ವರ್ಷಗಳಿಂದ ಹೋರಾಟ ನಡೆಯುತ್ತಲೇ ಇದೆ. ಆದರೆ ಇದುವರೆಬಿಗೂ ಕೂಡ ವೃತ್ತಿ ತೆರಿಗೆ ರದ್ದಾಗಲಿಲ್ಲ. ಹಿಂದೆ ಶ್ರೀಮಾನ್ ಎಂ. ವೈ ಘೋರ್ಪಡೆಯವರು ಹಣಕಾಸಿನ ಮಂತ್ರಿಗಳಾಗಿದ್ದಾಗ ನಾನು ಈ ಮನೆಯ

ಶಾಸಕನಾಗಿ ಸುಮಾರು ೭ ದಿವಸಗಳ ಕಾಲ ಉಪವಾಸ ಸತ್ಯಾಗ್ರಹ ಮಾಡಿದ್ದೆ. ಆಗ ಅಂದಿನ ಹಣಕಾಸಿನ ಮಂತ್ರಿಗಳು ಸ್ವಲ್ಪ ರಿಯಾಯ್ತಿಯನ್ನು ಕೊಟ್ಟಿದ್ದರು. ಆದೇ ರೀತಿ ಈಗ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆಂದು ನನಗನಿಸುತ್ತದೆ, ಆಗ ಅವರು ಹೇಳಿದರು ಮುಂದೆ ಏನಾದರೂ ಬದಲಾವಣೆ ಮಾಡೋಣವೆಂದು ಸಹ ಹೇಳಿದರು. ಆದರೆ ಯಾವ ಬದಲಾವಣೆಯನ್ನು ಸಹ ಮಾಡಲಿಲ್ಲ. ಅವರೇ ಅಧಿಕಾರದಿಂದ ಹೊರಟು ಹೋದರು. ಆದ್ದರಿಂದ ನಾನು ಹೇಳುವುದೇನೆಂದರೆ ಅವರು ಮಾಡಿದಂಥ ರೀತಿಯಲ್ಲಿ ತಾವು ಮಾಡುವುದು ಬೇಡ.

ನನಗನ್ನಿಸುತ್ತದೆ ಈ ಜನತೆಯು ಕೇಳಿಕೆಯನ್ನು ಮಾನ್ಯತೆ ಮಾಡದೆ ಇರುವುದು ತಪ್ಪು ಎಂದು ನನ್ನ ಅಭಿಪ್ರಾಯ. ಏಕೆಂದರೆ ಅನೇಕ ವರ್ಷಗಳಿಂದ ಇರುವ ಕೇಳಿಕೆ ಇದು. ಎರಡನೆಯದಾಗಿ, ಇದೊಂದು ಅವಾಸ್ತವಿಕವಾದಂಥ, ಅಪ್ರಜ್ಞಾನಿಕವಾಗಿರುವ ತೆರಿಗೆ ಏನ್ನುವುದನು ಯಾರ್ಯಾರು ತೆರಿಗೆ ಬಗ್ಗೆ ಪರಿಣತರು ಇದ್ದಾರೆ ಅವರೂ ಒಪ್ಪಿಕೊಳ್ಳುತ್ತಾರೆ, ಇದು ಸೈಂಟಿಫಿಕ್ ಅಲ್ಲವೆಂದು ಅನೇಕ ರಾಜ್ಯಗಳಲ್ಲಿ ಇದನ್ನು ಯೋಚನೆ ಮಾಡಿದವರೂ ಕೂಡ ಕೈಬಿಟ್ಟಿರು. ಪಂಜಾಬ್‌ನಲ್ಲಿ, ಹರಿಯಾಣದಲ್ಲಿ ಇವರು ಇಂಟ್ರಡ್ಯೂಸ್ ಮಾಡಿ ವಾಪಸ್ ತೆಗೆದುಕೊಂಡಿದ್ದಾರೆ. ಆ ರಾಜ್ಯಗಳಲ್ಲಿ ಕಾಂಗ್ರೆಸ್‌ನವರು ಆಳತಕ್ಕಂಥ ರಾಜ್ಯಗಳು. ಅಲ್ಲಿ ಸಹ ವಾಪಾಸ್ ತೆಗೆದುಕೊಂಡಿರುವಾಗ ಇಲ್ಲಿ ಪೃತ್ತಿ ತೆರಿಗೆ ಹಾಕಿರುವುದು ಯಾವ ನ್ಯಾಯ ? ಇದು ನ್ಯಾಯವಲ್ಲವೆಂದು ನಮ್ಮ ಅಭಿಪ್ರಾಯ. ಇದು ಕಾನೂನಿನ ವಿರುದ್ಧವಲ್ಲ ಆದರೆ ನಮಗೆ ಕೊಟ್ಟಂಥ ಭರವಸೆಗಳಿಗೆ ವಿರುದ್ಧವಾಗಿದೆ. ಬೇರೆ ಪಕ್ಷದವರನ್ನು ಟೀಕೆ ಮಾಡುತ್ತಾ ಇರುವಂಥ ಸಂದರ್ಭದಲ್ಲಿ ಮತ್ತು ಅವರು ಆಡಳಿತ ನಡೆಸತಕ್ಕ ರಾಜ್ಯಗಳಲ್ಲಿ ವಾಪಾಸ್ ತೆಗೆದುಕೊಂಡಿರುವಾಗ, ನೀವು ಆ ರೀತಿ ಇದನ್ನು ಇಟ್ಟುಕೊಂಡಿದ್ದರೆ ಖಂಡಿತವಾಗಿಯೂ ಶೋಭಿಸುವುದಿಲ್ಲ. ಇಷ್ಟೇ ಅಲ್ಲದೆ ನೀವು ಕೊಟ್ಟರತಕ್ಕಂಥ ವಚನಗಳಿಗೆ ನೀವು ಭ್ರಷ್ಟರು ಎಂಬುದನ್ನು ಜನಗಳು ಎಲ್ಲಾ ಹೇಳಬೇಕಾಗುತ್ತದೆ ನಿಮ್ಮ ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ – ಈ ವೃತ್ತಿ ತೆರಿಗೆಯನ್ನು ರದ್ದು ಮಾಡುತ್ತೇವೆಂದು. ಆದರೆ ರದ್ದು ಮಾಡುತ್ತೇವೆಂದು ಹೇಳಿ ಮತ್ತೆ ಇದನು ಪುನಃ ಇಟ್ಟದ್ದು ಸರಿಯಲ್ಲ. ಈ ವೃತ್ತಿ ತೆರಿಗೆಯಿಂದ ಬಹಳ ಜಾಸ್ತಿ ಬರವಾನ ಬರುವುದೆಂದಾಗಿದ್ದರೆ, ಅದನ್ನು ತೆಗೆದರೆ ಬರವಾನ ಕಡಿಮೆಯಾಗುತ್ತದೆ ಅಥವಾ ನಷ್ಟವಾಗುತ್ತದೆಂದು ಹೇಳಬಹುದು. ಇದನ್ನು ಮಾನ್ಯ ರಾಮದೇವ್‌ರವರು ಹೇಳುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಅವರು ಹೇಳಿಲ್ಲ. ಇದರ ನಿಜಾಂಶವೇನೆಂದರೆ ೧೧ ಲಕ್ಷ ಆಸೆಸಿಸ್ ಇದ್ದರೆ ಇದರಲ್ಲಿ ವಿನಾಯಿತಿ ಕೊಟ್ಟಿರುವುದು ೧೦ ಲಕ್ಷ ಜನರಿಗೆ ಅಂದರೆ ಅದರ ಹೊರಗಿರುವವರು ಸುಮಾರು ೧ಲಕ್ಷ. ಆ ಒಂದು ಲಕ್ಷ ಜನರಿಗೆ ವ್ಯವಹಾರ ಮಾಡುವುದಕ್ಕೆ, ವಸೂಲ್ಮಾಡುವುದಕ್ಕೆ ಇಷ್ಟೆಲ್ಲ ಸಿಬ್ಬಂದಿ. ಇಷ್ಟೆಲ್ಲ ಅಧಿಕಾರಿಗಳು ಏಕೆ ? ಬಹಳ ದೊಡ್ಡ ಪರವಾನ ಹೋಗುತ್ತದೆಂದು ಇದ್ದರೆ ಅದು ಬೇರೆ ಮಾತು. ಈ ರೀತಿ ಮಾಡಿರುವುದು ಅರ್ಥವಿಲ್ಲದಂತಾಗುತ್ತದೆ. ನನಗನ್ನಿಸುತ್ತದೆ ಏನೋ ಒಂದು ಬದಲಾವಣೆ ಮಾಡಬೇಕೆಂದು ೧೫೦೦ ರೂಪಾಯಿಗಿಂತ ಕೆಳಗಡೆ ಇರತಕ್ಕವರಿಗೆ ರದ್ದು ಮಾಡುತ್ತೇವೆಂದು ಹೇಳುವುದರ ಬದಲು ಪೂರ್ತಿ ನೂರಕ್ಕೆ ನೂರರಷ್ಟು ರದ್ದು ಮಾಡಿದ್ದರೆ ಸ್ವಾಗತ ಮಾಡುತ್ತಿದ್ದೆ. ಆದ್ದರಿಂದ, ಇದಕ್ಕೆ ಹೃತ್ಪೂರ್ವಕವಾಗಿ ಸ್ವಾಗತ ಮಾಡುವುದು ಬಹಳ ಕಷ್ಟ. ನೂರಕ್ಕೆ ನೂರರಷ್ಟು ನೀವು ರದ್ದು ಮಾಡಿ. ಆ ರೀತಿ ಮಾಡಿದರೆ ಬಹಳ ಸಂತೋಷ ಇಲ್ಲದಿದ್ದರೆ ಏನೂ ಪ್ರಯೋಜನವಿಲ್ಲವೆಂದಂ ಹೇಳುತ್ತೇನೆ.

†ಶ್ರೀ ಎಂ. ಎಸ್. ನಾರಾಯಣ ರಾವ್ (ಗಾಂಧಿನಗರ).—ಸನ್ಮಾನ್ಯ ಅಧ್ಯಕ್ಷರೇ, ಏನು ಈ ಆಮೆಂಡ್‌ಮೆಂಟ್ ತಂದಿದ್ದಾರೆ, ಅದನ್ನು ಸ್ವಾಗತಿಸುತ್ತಾ. ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಆಮೆಂಡ್‌ಮೆಂಟ್‌ನಿಂದ ಬಹಳ ಸಂತೋಷವಾಗಿದೆ ಏಕೆಂದರೆ, ನಾವು ಏನು ಒಂದು ಆಶ್ವಾಸನೆ ಕೊಟ್ಟಿದ್ದೇವೆ ಅದನ್ನು ಕೆಲವೇ ಜನರಿಗೆ ಆದರೂ ಅದನ್ನು ಪೂರ್ತಿ ತೆಗೆದುಹಾಕುವುದಕ್ಕಾಗಿದೆ. ಇದರಿಂದ ಬಹಳ ಸಂತೋಷವಾಗಿದೆ. ಆದರೆ, ಅದೇ ರೀತಿಯಲ್ಲಿ ಮತ್ತೊಂದು ಬಹಳ ಶೋಚನೀಯವಾದ ಸಂಗತಿ ಏನೆಂದರೆ, ಈ ಸಂಬಳ ೧೫೦೦ ರೂಪಾಯಿವರೆಗೆ ಏನು ಎಕ್ಸೆಂಪ್‌ಶನ್ ಕೊಟ್ಟಿದ್ದಾರೆ. ಅದೇ ಪ್ರೊಫೆಶನಲ್ ಮತ್ತು ಸೆಲ್ಫ್ ಎಂಪ್ಲಾಯಿಡ್‌ಗಳಿಗೆ ಇದೇ ರೀತಿ ಎಕ್ಸೆಂಪ್‌ಶನ್ ಕೊಟ್ಟಿಲ್ಲ. ಇದು ನ್ಯಾಯವಾಗಿ, ಲೀಗಲ್ ಆಗಿ ನೋಡಿದರೂ ಕೂಡ ಡಿಸ್‌ಕ್ರಿಮಿನೇಟರಿಯಾಗುತ್ತದೆ. ಸರ್ಕಾರ ಈ ರೀತಿ ಡಿಸ್‌ಕ್ರಿಮಿನೇಷನ್ ಮಾಡಬಾರದು, ಎಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ, ತಾವು ನೋಡಿರುವ ಹಾಗೆ ೧೫೦೦ ರೂಪಾಯಿ ಸಂಬಳದವರೆಗೆ ಎಕ್ಸೆಂಪ್‌ಶನ್ ಕೊಟ್ಟಿದ್ದೀರಿ, ಅದೇ ರೀತಿ ೨೫ ಸಾವಿರದಿಂದ

೫೦ ಸಾವಿರ ಟರ್ನ್ ಓವರ್‌ವರೆಗೆ ಎಕ್ಸ್‌ಎಂಪ್ಷನ್ ಕೊಟ್ಟಿದ್ದೀರಿ. ಆದರೆ ಇವರು ಡಿಸ್ಕ್ರಿಮಿನೇಷನ್ ಮಾಡುತ್ತ ಇರುವ ಸೆಲ್ಫ್ ಎಂಪ್ಲಾಯಿಡ್ ಮತ್ತು ಪ್ರೊಫೆಶನಲ್ಸ್ ಯಾರು ಇದ್ದಾರೆ, ತಮ್ಮ ಸ್ವಶಕ್ತಿಯಿಂದ ಕೆಲಸ ಮಾಡಿಕೊಂಡು ಪರವಾನ ಮಾಡಿಕೊಳ್ಳುತ್ತಿದ್ದಾರೆ ಅವರ ಮೇಲೆ ಹೆಚ್ಚಾಗಿ ತೆರಿಗೆಯನ್ನು ಹಾಕಿದ್ದೀರೆಂದು ಕಾಣುತ್ತದೆ. ಹಿಂದೆ ಪಾನ್ಯ ಮುಖ್ಯ ಮಂತ್ರಿಗಳು ಒಂದು ಆಶ್ವಾಸನೆ ಕೊಟ್ಟಿದ್ದರು. ಈ ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲಿ ಇದರ ಬಗ್ಗೆ ಚರ್ಚಿಸಿ ಈ ತೆರಿಗೆಯನ್ನು ಪೂರ್ತಿ ತೆಗೆದುಹಾಕುವುದಕ್ಕೆ ಯೋಚನೆ ಮಾಡುತ್ತೇವೆಂದು ಹೇಳಿದ್ದರು. ಈಗಲಾದರೂ ಕಾರ್ಪೊರೇಷನ್ ಗಾಗಲೀ, ಮುನಿಸಿಪಾಲಿಟಿಗಾಗಲೀ ಚುನಾವಣೆ ಮಾಡಿರುವುದರಿಂದ ಇದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನೊಂದು ಪಾನ್ಯ ಮುಖ್ಯಮಂತ್ರಿಗಳು ಪ್ರೊಫೆಶನಲ್ಸ್‌ಗೆ ಎಕ್ಸೆಂಪ್ಷನ್ ೬ ವರ್ಷದಿಂದ ೧೦ ವರ್ಷದವರೆಗೆ ಮಾಡುತ್ತೇವೆಂದು ಹೇಳಿದ್ದಾರೆ. ಈ ಅಮೆಂಡ್‌ಮೆಂಟ್ ಕಾಪಿ ಬೆಯಲ್ಲಿ ಅದು ಬಂದಿಲ್ಲ. ಅದನ್ನು ಆದಷ್ಟು ಜಾಗ್ರತೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ತರಹ ಅಡ್ವೊಕೇಟ್ಸ್ ಮತ್ತು ಡಾಕ್ಟರ್ ಕೆಲವರು ಈ ತೆರಿಗೆಯನ್ನು ೭೬ ರಿಂದಲೂ ಕೊಟ್ಟಿಲ್ಲ. ಏಕೆಂದರೆ ಬೆಂಗಳೂರು ಬಾರ್ ಅಸೋಸಿಯೇಷನ್‌ನವರು ಹೈಕೋರ್ಟ್‌ನಲ್ಲಿ ಕೇಸ್ ಹಾಕಿದ್ದಾರೆ. ಆ ಕೇಸ್ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದೆ. ಆದರೆ, ಇಲ್ಲಿ ಟ್ಯಾಕ್ಸ್ ಬಹಳ ಜನರು ಕೊಟ್ಟಿಲ್ಲ. ಈಗ ಹಲವಾರು ಜನರಿಗೆ ನೋಟೀಸ್ ಬಂದಿದೆ. ಅದರಲ್ಲಿ ಪೆನಾಲ್ಟಿ ಇಂಟರೆಸ್ಟ್ ಎಲ್ಲಾ ಸೇರಿಸಿ ತೆರಿಗೆ ಎಷ್ಟು ಕೊಡಬೇಕೋ ಅದರ ವಿವರಪಟ್ಟಿ ಹಾಕಿದ್ದಾರೆ. ಈಗ ಫಾರ್ಮರ್ಸ್‌ಗೆ ಏನು ಒಂದು ಎಕ್ಸೆಂಪ್ಷನ್ ಕೊಟ್ಟಿದ್ದಾರೆ ಅಂದರೆ ಅವರು ೨-೩ ತಿಂಗಳಲ್ಲಿ ಲೋನ್ ಕಟ್ಟಿದರೆ ಅವರಿಗೆ ಪೀನಲ್ ಇಂಟರೆಸ್ಟ್‌ನಲ್ಲಿ ಎಕ್ಸೆಂಪ್ಷನ್ ಕೊಡಬಹುದೆಂದು ಇದೆ. ಅದೇ ತರಹ ಇವರಿಗೂ ಅವಕಾಶ ಕೊಟ್ಟು ಯಾರು ಅರಿಯರ್ಸ್ ತೆರಿಗೆ ಕೊಡುತ್ತಾರೆ ಅವರಿಗೆ ೨-೩ ತಿಂಗಳ ಪೀನಲ್ ಇಂಟರೆಸ್ಟ್ ಹಾಕದೆ ಮನ್ನಾ ಕೊಡುವುದಕ್ಕೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಚಾರ, ಹಿಂದೆ ಪಾನ್ಯ ಮುಖ್ಯಮಂತ್ರಿಗಳು ರಾಜಕಾರಣ ಸಪ ತೆರಿಗೆಯಲ್ಲಿ ತಳವಡಿಸಿಕೊಂಡಿದ್ದಾರೆ. ಇದರಿಂದ ನಮ್ಮಲ್ಲಿ ಕೆಲವರು ಎರಡೆರಡು ತೆರಿಗೆಗಳನ್ನು ಕೊಡಬೇಕಾದ ಸಂದರ್ಭ ಬರುತ್ತದೆ, ಉದಾಹರಣೆಗೆ, ಅಡ್ವೋಕೇಟ್‌ಆಗಿ ಅಲ್ಲೂ ಕಟ್ಟುತ್ತಿದ್ದಾರೆ, ರಾಜಕಾರಣಿ ಇಲ್ಲೂ ಕಟ್ಟುತ್ತಿದ್ದಾರೆ. ಆದ್ದರಿಂದ, ಈ ಎರಡು ತರಹದ ತೆರಿಗೆ ಬೇಡದ ಹಾಗೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಸ್. ಆಚಾರ್ (ಉಡುಪಿ).—ಪಾನ್ಯ ಅಧ್ಯಕ್ಷರೇ, ನಾನು "The Karnataka Tax on Professions Trades, Callings and Employments (Amendment) Bill 1983 ..... ಇದರ ಬಗ್ಗೆ ನಾಲ್ಕು ಮಾತುಗಳನ್ನಾಡಬಯಸುತ್ತೇನೆ. ಈ ಪ್ರೊಫೆಶನಲ್ಸ್ ಟ್ಯಾಕ್ಸ್ ೧೯೭೬ ರವರೆಗೂ ಅದು ನಗರಸಭೆಗಳ ಆದಾಯದಲ್ಲಿದ್ದು ಸ್ಟೇಟ್ ಲಿಸ್ಟ್‌ನಲ್ಲಿದ್ದುದರಿಂದ ತದನಂತರ ಸೊರ್ಸ್ ಆಫ್ ಇನ್‌ಕಂ ಎಂದು ಇತ್ತು. ಇದನ್ನು ಮುನಿಸಿಪಾಲಿಟಿ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಕೊಡುತ್ತಿದ್ದರು. ಕಾರಣವಿಷ್ಟೆ ನಗರಸಭೆ ವ್ಯಾಪ್ತಿಗಳಲ್ಲಿ ಒಂದು ಸಣ್ಣ ಸಂಸ್ಥೆಯಾಗಿರುವುದರಿಂದ ಜನರ ಆದಾಯದಲ್ಲಿ ತೆರಿಗೆಗಾಗಿ ೨೫೦ ರೂಪಾಯಿ ಸೀಲಿಂಗ್ ಹಾಕಿದ್ದಾರೆ. ಸಂವಿಧಾನ ಕರ್ತರನ್ನು ಆ ದೃಷ್ಟಿಯಿಂದ ಇವೊತ್ತು ಅಭಿನಂದಿಸಬೇಕು. ಏಕೆಂದರೆ ಅದರ ಮಿತಿಯನ್ನು ೨೫೦ ರೂಪಾಯಿಯವರೆಗೆ ಎಂದು ಹಾಕಿರದೆ ಇದ್ದಿದ್ದರೆ ಬಹಶಃ ಆಡಳಿತದಲ್ಲಿರುತಕ್ಕವರು ಎಷ್ಟು ಸಾವಿರದವರೆಗೆ ಏರಿಸುತ್ತಿದ್ದರೋ ಏನೋ ದೇವರಿಗೇ ಗೊತ್ತು. ಅದು ಸ್ಥಳೀಯ ಸಂಸ್ಥೆಗಳ ಲಿಸ್ಟ್‌ನಲ್ಲಿದ್ದು ನಗರಸಭೆಗಳಿಗೆ ಇದರಿಂದ ೨೦-೪೦ ರೂಪಾಯಿ ಆದಾಯವಾಗಿ ಬರುತ್ತಿತ್ತು. ೧೯೭೬ನೇ ಇಸವಿಯವರೆಗೆ ಸ್ಥಳೀಯ ಸಂಸ್ಥೆಗಳಿಗೆ ಇದರಿಂದ ಲೋಕಲ್ ಇನ್‌ಕಂಟ್ಯಾಕ್ಸ್ ರೂಪದಲ್ಲಿ ಆದಾಯ ಬರುತ್ತಿದ್ದು ಇವುಗಳನ್ನು ಮುನಿಸಿಪಾಲಿಟಿ ಮತ್ತು ಪಂಚಾಯತ್‌ಗಳು ವಸೂಲ್ಮಾಡುತ್ತಿದ್ದವು. ಅದನ್ನು ೧೯೭೬ನೇ ಇಸವಿಯಲ್ಲಿ ಸ್ಥಳೀಯ ಸಂಸ್ಥೆಗಳ ಲಿಸ್ಟ್‌ನಿಂದ ತೆಗೆದು ಪುನಃ ರಾಜ್ಯ ಸರ್ಕಾರ ಅದನ್ನು ಪಡೆದು ಇದನ್ನು ಸಾಕಷ್ಟು ಜನರಿಗೆ ವಿಸ್ತರಿಸಿ ಪೀನಲ್ ಕ್ಲಾಸ್ ಸಪ ಸೇರಿಸಿ ವಸೂಲ್ಮಾಡುತ್ತಿದ್ದಾರೆ. ಇದು ಹೋಗಿದೆ ಎಂದರೆ ನಮ್ಮಲ್ಲಿ ಒಂದೊಗಾದೆ ಇದೆ ..ತಲೆಗಿಂತ ಮಂಡಾಸು ದೊಡ್ಡದು. ಏನು ಆದರಂತೆ ಒಬ್ಬ ತೆರಿಗೆ ಕೊಡುವುದಕ್ಕೆಮರೆತು ಹೋದರೆ ಅವನಿಗೆ ಪೀನಲ್ ಹಾಕೆ ತೆರಿಗೆಯನ್ನು ಕ್ಷಿಪ್ರದಲ್ಲಿ ಪಟ್ಟು ಚಾಸ್ತಿ ವಸೂಲ್ಮಾಡುತ್ತಾರೆ ಇದು ಸರಿಯಲ್ಲ ಪೊನ್ನೆ ಜನವರಿಯಲ್ಲಿ ಜನತಾ ಪಕ್ಷದವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ, ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ ವೃತ್ತಿತೆರಿಗೆಯನ್ನು ಮನ್ನಾಮಾಡುತ್ತೇ

ವೆಂದು. ಆ ಮೇಲೆ ಇದರಬಗ್ಗೆ ಒಂದು ಅಮೆಂಡ್‌ಮೆಂಟ್ ತರುವುದು ಅವಶ್ಯಕತೆಯಿದೆಯೆಂದು ಅದರ ೧೫೦೦ ರೂಪಾಯಿಯವರೆಗೆ ಆದಾಯವಿರುವವರಿಗೆ ರದ್ದು ಮಾಡುತ್ತೇವೆಂದು ಈ ತಿದ್ದುಪಡಿಯನ್ನು ಳಳವಡಿಸಿಕೊಂಡು ತಂದಿದ್ದಾರೆ ಅಪ್ಪರವಾಟ್ಟಿಗೆ ಇದನ್ನು ಸ್ವೀಕಾರ ಮಾಡುತ್ತೇನೆ

ಪಿ–೫೦ ಪಿ. ಎಂ. (ಶ್ರೀ ಪಿ. ರಾಂದೇವ್ ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು) —

ಒಂದು ಮಟ್ಟಿಕ್ಕೆ ಸ್ವೀಕಾರ ಮಾಡಬೇಕಾಗಿದೆ ಇದರಿಂದ ಸಾವಿರದ ಐನೂರು ರೂಪಾಯಿವರೆಗೆ ಸಂಬಳ ಪಿಕ್ಕುವವರಿಗೆ ಮಾತ್ರ ಪ್ರೊಟೆಕ್ಷನ್ ಕೊಟ್ಟು ಹಾಗೆ ಆಗಿದೆ ವ್ಯಾಪಾರಿಗಳು ಯಾವ ಲೆಕ್ಕವನ್ನು ಕೊಟ್ಟರೂ ಅಧಿಕಾರಿಗಳು ಅದನ್ನು ನಂಬುವುದಿಲ್ಲ ವಕೀಲರಿಗೆ ವಿನಾಯಿತಿಯನ್ನು ಕೊಟ್ಟಿದ್ದೀರಿ ಆದರೆ ವೈದ್ಯರು ಮತ್ತು ಬೇರೆ ಬೇರೆ ರೀತಿಯಲ್ಲಿ ಸ್ವಂತ ಉದ್ಯೋಗ ಮಾಡಿಕೊಂಡಿರುವ ಅನೇಕ ಜನರು ಕಿರುಕಳಕ್ಕೆ ಒಳಗಾಗಿದ್ದಾರೆ. ಅವರುಗಳಿಗೆ ಪ್ರಾರಂಭದ ದಿಸೆಯಲ್ಲಿ ಹೆಚ್ಚಿಗೆ ಆದಾಯ ಇರಲಿಕ್ಕಿಲ್ಲ ಹನ್ನೊಂದು ಲಕ್ಷ ಜನರಲ್ಲಿ ಆಸ್ಸೆಸ್ಸಿಸ್ ಒಂದು ಲಕ್ಷ ಜನರು ಇದ್ದಾರೆ. ಒಂದು ಲಕ್ಷ ಜನರಿಗಾಗಿ ಏಕೆ ವೃತ್ತಿ ತೆರಿಗೆಯನ್ನು ಜಾರಿಯಲ್ಲಿ ಇಡುತ್ತೀರಿ? ಒಂದು ಲಕ್ಷ ಜನರು ಈ ಪರಿಮಿತಿಗೆ ಒಳಪಟ್ಟರೆ ೨೫೦ ರೂಪಾಯಿಯಂತೆ ಲೆಕ್ಕ ಹಾಕಿದರೆ ಎರಡೂವರೆ ಕೋಟಿ ರೂಪಾಯಿ ಬರುತ್ತದೆ. The taxation has got a self–limiting character..... ಇದು ಹೆಚ್ಚು ಆಗಲಿಕ್ಕೆ ಸಾಧ್ಯವಿಲ್ಲ. ರಾಜ್ಯದಲ್ಲಿ ಸ್ವಂತ ಉದ್ಯೋಗದಿಂದ ಮರ್ಯಾದೆಯಾಗಿ ಜೀವನ ಮಾಡುವ ಮಧ್ಯಮ ವರ್ಗದವರು ತಿಂಗಳಿಗೆ ಒಂದೂವರೆ ಸಾವಿರ ರೂಪಾಯಿಗಿಂತ ಹೆಚ್ಚು ಸಂಪಾದನೆ ಇರುವ ಸಂದರ್ಭ ಇಲ್ಲ. ಆದರೆ ಈ ಕಿರುಕುಳಕ್ಕೆ ಮಾತ್ರ ಒಳಗಾಗಿದ್ದಾರೆ. ಆದ್ದರಿಂದ ಇದನ್ನು ಸಂಪೂರ್ಣವಾಗಿ ಸ್ಕ್ರಾಪ್ ಮಾಡಬೇಕು ಇದಕ್ಕೆ ಮುಂದುವರಿಯಲು ಯಾವ ಯೋಗ್ಯತೆಯೂ ಇಲ್ಲ ನಾಳೆ ಇದನ್ನು ಹತ್ತು ಲಕ್ಷಜನರಿಗೆ ವಿಸ್ತರಿಸಿ, ೨೫೦ ರೂಪಾಯಿ ಪ್ರಮಾಣವನ್ನು ಎರಡೂವರೆ ಸಾವಿರಕ್ಕೆ ಏರಿಸಿ ಹೆಚ್ಚು ಹಣ ವಸೂಲು ಮಾಡಬೇಕೆಂದು ಆ ಕಡೆಗೆ ಆಸೆಯತ್ತ ಗಮನ ಹೋಗುವ ಮುನ್ನವೇ ಇದನ್ನು ಸ್ಕ್ರಾಪ್ ಮಾಡಬೇಕು ಇದರಿಂದ ಯಾವ ಹಿತಸಾಧನೆಯೂ ಆಗಾಡಿದ ಹಾಗೆ ಆಗುವುದಿಲ್ಲ. ಒಂದು ಲಕ್ಷ ಜನರಿಗೆ ಸಾಧ್ಯವಾದ ಕಿರುಕುಳ ಬರುತ್ತದೆ. ರಾಜ್ಯದ ಬೊಕ್ಕಸಕ್ಕೆ ಹೆಚ್ಚಿಗೆ ಹಣವೇನೂ ಬರುವುದಿಲ್ಲ [redacted] ಜೊತೆಗೆ ಬೇರೆ ಟ್ಯಾಕ್ಸೇಷನ್ ಇದೆ. ತೆರಿಗೆಗೆ ಒಳಪಡುವವರನ್ನು ಆದರೆ ವ್ಯಾಪ್ತಿಗೆ ತರಬಹುದು ನ್ಯಾ[redacted]ಪ್ಪವಾದ ಮಾತಿನಲ್ಲಿ ಹೇಳುತ್ತಿದ್ದೇನೆ. ಏನೆಂದರೆ ರಿಪೀಲರ ಈ ಮೂಲ ಕಾನೂನಿಗೆ ಏನು ತಿದ್ದುಪಡಿಯನ್ನು ತರಲಾಗಿದೆ ಇದನ್ನು ರದ್ದು ಮಾಡುವ ಘೋಷಣೆಯನ್ನು ಆದಷ್ಟು ಬೇಗ ಮಾಡಬೇಕು. ರಾಜ್ಯದಲ್ಲಿ ಮಧ್ಯಮ ವರ್ಗದ ಜನತೆಗೆ ಆಗುತ್ತಿರುವ ಕಿರುಕಳವನ್ನು ತಪ್ಪಿಸುವ ದೃಷ್ಟಿಯಿಂದ ಈ ವೃತ್ತಿ ತೆರಿಗೆಯನ್ನು ರದ್ದು ಮಾಡುವುದು ಅವಶ್ಯಕತೆ ಇದೆ. ಈ ತಿದ್ದುಪಡಿಯನ್ನು gracefully to be withdrawn and this 1976 ಮೂಲ ಆಕ್ಟ್ ಏನಿದೆ ಅದನ್ನು ರದ್ದು ಮಾಡುವ ಘೋಷಣೆಯನ್ನು ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

†SRI R. S. MANE (BELGAUM) —Sir, I endorse the views expressed by my friends Sri Krishnan and Dr. V.S. Achar. This Act, nacording to me, is only an evidence to show that election manufestoes are only to be flouted, published and only to win the votes of the people. There was a clearout promise given in the election manifesto of the Janata Party that this profession tax would be abolished and the Act would be withdrawn.—Now we find that the Act is to stay in a modified from.

I belong to the legal profession and I fail to understand as to why the Government wants to recover profession tax from the lawyers. Because of the Land Reforms Act, lawyers are forbidden from appearing before the Tribunals. For the cases under the Cooperative Societies, Act and in many other cases the litigants are not allowed to be present through the lawyers. Today we

have before us one more Bill called 'The Karnataka Advocates Welfare Fund Bill, 1983'. These Two Bills are contradictory to each other. Considering the plight of the advocates and legal practitioners, the Government have introduced this Bill so that they may be given some solace. But at the same time this burden some profession tax is levied on them. Therefore, I oppose this Bill and suggest that it is high time the Government stick to their promise given in the election manifesto and scrap this Act forthwith. Thank you.

SRI M. S. KRISHNAN.—Sir, I am on a point of order. I want to bring one matter to your notice and I want your ruling on that. Rule 83 says.

> "When a Bill is introduced or on some subsequent occasion, the member-in-charge may make one of the following motions in regard to his Bill, namely.—
>
> i) that it be taken into consideration ; or
>
> ii) that it be referred to a Select Committee of the House ; or
>
> iii) that it be referred to a Joint Committee of the Houses with the concurrence of the Council ; or
>
> vi) that it be circulated for the purpose of eliciting opinion thereon.
>
> Provided that no such motion as is referred to in clause (iii) shall be made with reference to a Bill making provision for any of the matters specified in sub-clause (a) to (f) of clause (1) of Article 199 of the Constitution.

This speaks of the member-in-charge of the bill. The member in-charge of the Bill has to introduce the Bill and has to move for consideration. After consideration the member-in-charge shall also reply to it and take amendments if any. According to the list of Business given today the member-in-charge is Sri Ramakrishna Hegde, the Chief Minister. Now I don't find him here on such an important Bill. The only alternative is to delegate it under rule 85. I am raising this point only for putting the things right. Whether he can do it now ? Rule 85 says.

> "No motion that a Bill be taken into consideration or be passed shall be made by any member other than the member-in-charge of the Bill and no motion that a Bill be circulated or re-circulated for the purpose of eliciting opinion there on shall be made by any member other than

the member-in-charge except by way of amendment to a motion made by the member-in-charge

Provided that if the member-in-charge of a Bill is unable, for reasons which the Speaker considers adequate, to move the next motion in regard to his Bill at any subsequent stage after introduction, he may authorise another member to move that particular motion with the approval of the Speaker."

This particular proviso says that he must be unable for the reasons which the Speaker considers adequate. I don't know whether the member in-charge has told you that he has got adequate reasons for not being able to be present here. At this point of time is anybody else within his right provided the member-in-charge has requested you that he is unable to move the subsequent stages of the Bill, provided you are satisfied that those reasons are adequate and it must be with your approval. You must be satisfied that the Chief Ministers's absence after moving this Bill for consideration has adequate reasons.

I am raising it only to say that I have no disrespect to Sri A. Lakshmisagar, who is a good friend of mine. The point is, that there should be no disrespect to this House and the members should not be taken for granted by the Chief Minister or any other Minister for that matter. I feel we are being taken for granted on this case. That is why I am specifically asking and I am requesting you to clarify this matter whether you have been told of the reason and whether you consider that reason as adequate and whether you have given the approval.

SRI A. LAKSHMISAGAR.--There is provision in the rules that a member in charge can as well carry on the business of the House in the absence of the person in whose name the list of business is listed for the day. According to the rules of procedure, Member in charge means, in the case of aGovernment Bill, any member acting on behalf of the Government. This fully answers the objections raised by Mr. Krishnan.

MR. CHAIRMAN.--The Chair has been informed of the absence of the Chief Minister. Now Sri Lakshmisagar will reply.

ಶ್ರೀ ಎ ಲಕ್ಷ್ಮಿಸಾಗರ್.-- ಮಾನ್ಯ ಅಧ್ಯಕ್ಷರೇ, ಹಲವಾರು ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರಲ್ಲಿ ನಾನು ಅವುಗಳಿಗೆ ಉತ್ತರ ಕೊಡುವುದಕ್ಕಿಂತ ಮೊದಲು ಮನಸೂದೆಯಲ್ಲಿ ವಿಷಯ ಪ್ರಸ್ತಾಪವಾಗಿರುವುದನ್ನು ಈ ಸಭೆಯು ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಸಂಬಳ ಬರತಕ್ಕಂತಹವರಿಗೆ ತುಂಬಾ ಅನುಕೂಲ ಮಾಡಿಕೊಟ್ಟಿದ್ದೇವೆಂದು ಈ ಗಾಗಲೇ ಮಾತನಾಡಿದ್ದಾರೆ. ೧೫೦೦ ರೂಪಾಯಿಗಳ ಮೂಲ ಸಂಬಳ ಬರತಕ್ಕಂತಹವರಿಗೆ ತುಂಬಾ ಇದರಿಂದ ಅನುಕೂಲ ಸಿಕ್ಕಿದೆ ಎಂದು ಹೇಳುತ್ತಾರೆ. ಇದರಿಂದ ೪,೧೬,೦೦೦ ಜನರಿಗೆ ಅನುಕೂಲ

ವಾಗಿದೆ. ಮತ್ತು ವ್ಯಾಪಾರ ಮಾಡತಕ್ಕ ರೀತಿಯ ಜನರು ಅಂದರೆ ಅವರು ೪೦,೦೦೦ ರೂಪಾಯಿಗಳವರೆಗೆ ಆದರ ಪ್ರಮಾಣದ ಇದ್ದರೂ ಅಲ್ಲಿಯವರೆಗೆ ಈ ವೃತ್ತಿ ತೆರಿಗೆ ಬರುತ್ತಿತ್ತು. ಮೊದಲು ಇದು ೨೫,೦೦೦ ರೂಪಾಯಿಗಳು ಎಂದು ಇತ್ತು. ಅದನ್ನು ನಾವು ಈಗ ೪೦,೦೦೦ ಸಾವಿರ ರೂಪಾಯಿಗಳೆಂದು ಮಾಡಿದ್ದೇವೆ. ಇದರಿಂದ ೪,೪೨,೦೦೦ ಜನರಿಗೆ ಈ ಒಂದು ವಿನಾಯಿತಿ ಸಿಕ್ಕುತ್ತದೆ. ಇದರಿಂದ ಸರ್ಕಾರಕ್ಕೆ ಸುಮಾರು ಐದೂವರೆ ಕೋಟಿ ರೂಪಾಯಿಗಳಷ್ಟು ಬೋತಾ ಬರುತ್ತದೆ. ಇದರಿಂದ ಒಟ್ಟು ಸರ್ಕಾರಕ್ಕೆ ಈವರೆಗೆ ಬರುತ್ತಿದ್ದುದು ಹನ್ನೊಂದುವರೆ ಕೋಟಿ ರೂಪಾಯಿಗಳು. ಅದನ್ನು ಬಿಟ್ಟರೆ ಸೆಲ್ಫ್ ಎಂಪ್ಲಾಯಿಡ್ ಪರ್ಸನ್ಸ್ ಅವರಿಗೆ ಏನು ವಿನಾಯಿತಿಯನ್ನು ಕೊಟ್ಟಿದ್ದೀರಿ ಎನ್ನುವ ಮಾತನ್ನು ಹೇಳಿದ್ದಾರೆ. ಆ ವಿನಾಯಿತಿ ಇದರಲ್ಲಿ ಇಲ್ಲ. ನಿರ್ದಿಷ್ಟವಾದ ಸಂಬಳಗಾರರಿಗೆ ಇದರಿಂದ ತೊಂದರೆ ಯಾಗುತ್ತದೆ ಎನ್ನುವ ಮುಖ್ಯ ಕಾರಣಕ್ಕೋಸ್ಕರ ಇಷ್ಟು ಜನರಿಗೆ ಅಂದರೆ ೪,೪೨,೦೦೦ ಜನರಿಗೆ ಇದರಿಂದ ಅನುಕೂಲವಾಗುತ್ತದೆಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಕೀಲರಿಗೆ ಇದರಲ್ಲಿ ಏನೂ ತೊಂದರೆ ಇಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ನೋಟಿಫಿಕೇಷನ್ ಮುಖಾಂತರ ಮಾಡುವುದಕ್ಕೆ ಅವಕಾಶ ಉಂಟು. ಶ್ರೀಮಾನ್ ನಾರಾಯಣರಾವ್ ರವರು ಎರಡು ಮೂರು ಕಡೆ ವೃತ್ತಿ ತೆರಿಗೆಯನ್ನು ಕೊಡಬೇಕಾದ ಸಂದರ್ಭದಲ್ಲಿ ಏನು ಮಾಡುತ್ತೀರಿ ? ಎಂಬುದಾಗಿ ಕೇಳಿದ್ದಾರೆ. ಶ್ರೀಮಾನ್ ನಾರಾಯಣರಾವ್ ರವರಿಗೆ ಇಷ್ಟರವರೆಗೆ ಗೊತ್ತಿರಲಿಕ್ಕಿಲ್ಲ. ಹೈಯ್ಯೆಸ್ಟ್ ೨೫೦ ರೂಪಾಯಿಂಗಳನ್ನು ಒಂದು ವರ್ಷಕ್ಕೆ ಕೊಟ್ಟು ಬಿಟ್ಟರೆ ಬೇರೆ ಕಡೆ ಪುನಃ ಅತನು ವೃತ್ತಿ ತೆರಿಗೆಯನ್ನು ಕೊಡಬೇಕಾದಂಥ ಇಲ್ಲ. ಮತ್ತೆ ಜಾನಾರ್ಡನಯ್ಯನವರ ಪುಣ್ಯಾಳಿಕೆಯನ್ನು ಏನು ಹೇಳಿದ್ದೀರಿ ? ಏನನ್ನುವ ಮಾತನ್ನು ಹೇಳಿದ್ದಾರೆ. ಇದರಿಂದ ಕಿರುಕುಳವಾಗಿದೆ ಏನನ್ನುವ ಮಾತನ್ನೂ ಹೇಳಿದ್ದಾರೆ. ಬೇರೆ ಎಲ್ಲ ವಿಧದಲ್ಲೂ ತೆರಿಗೆಯಿಂದ ಕಿರುಕುಳವಾಗಿರುತ್ತದೆ. ಅನೇಕ ಸಲ ಈ ಮಾತನ್ನು ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.— ನೀವು ಪ್ರಾಮಿಸ್ ಮಾಡಿದ್ದೀರೋ ಇಲ್ಲವೋ ?

ಶ್ರೀ ಎ. ಲಕ್ಷ್ಮೀಸಾಗರ್. — ಒಂದೇ ವರ್ಷದಲ್ಲಿ ಮಾಡುತ್ತೇವೆಂದು ಹೇಳಿರಲಿಲ್ಲ. ಇನ್ನೂ ನಾಲ್ಕು ವರ್ಷಗಳಿವೆ.

ಶ್ರೀ ಎಂ. ಎಸ್. ಕೃಷ್ಣನ್. — ಏನೇನು ಭಾಷಣ ಮಾಡಿದ್ದಾರೆಂಬುದನ್ನು ತರಿಸಿ ನೋಡಿ. ಈ ವೃತ್ತಿ ತೆರಿಗೆಯನ್ನು ರದ್ದು ಮಾಡುತ್ತೇನೆಂದು ಅಪರ ಜಾಯಲ್ಲೇ ಹೇಳಿದ್ದಾರೆ. ಈಗ ಹಿಂದೆ ಹೋಗುತ್ತಿದ್ದೀರಲ್ಲಾ ಇನ್ನೇನು ಹೇಳಬೇಕು ಇದರ ಬಗ್ಗೆ ?

ಶ್ರೀ ಎ. ಲಕ್ಷ್ಮೀಸಾಗರ್. — ಪುಣ್ಯಾಳಿಕೆ ೫ ವರ್ಷಕ್ಕೆ ಒಂದು ಕೊಡತಕ್ಕಂತಹದ್ದು.

ಶ್ರೀ ಎಂ. ಎಸ್. ಕೃಷ್ಣನ್. — ಬಂದ ತಕ್ಷಣ ಒಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್. — ನಾಲ್ಕುವರೆ ಸಾವಿರ ಜನರಿಗೆ ಒಂದೇ ಸಾರಿ ವಿನಾಯಿತಿಯನ್ನು ಕೊಟ್ಟಿದ್ದೇವೆ. ವಕೀಲರಿಗೂ ವಿನಾಯಿತಿಯನ್ನು ಕೊಟ್ಟಿದ್ದೇವೆ. ಇನ್ನೂ ಸ್ವಲ್ಪ ಉಳಿದು ಕೊಂಡಿದೆ.

ಶ್ರೀ ವಿ. ಧನಂಜಯ ಕುಮಾರ್. — ವಕೀಲರು, ವರ್ಷಕ್ಕೆ ಅಂದರೆ ಪ್ರಾರಂಭದಲ್ಲಿ ೭ ವರ್ಷ ಯಾವ ವೃತ್ತಿ ತೆರಿಗೆಯನ್ನು ಕೊಡಬೇಕಾಗಿರಲಿಲ್ಲ. ಅದನ್ನು ಈಗ ತಾವು ೧೦ ವರ್ಷ ಅಂತ ಮಾಡಿದ್ದೀರಿ, ಆದರೆ ವರ್ಷಕ್ಕೆ ಹೈಯ್ಯೆಸ್ಟ್ ೨೫೦ ರೂಪಾಯಿಗಳನ್ನು ಕೊಟ್ಟರೆ ಬೇರೆ ಕಡೆ ಕೊಡಬೇಕಾಗುವುದು ಇಲ್ಲ ಎಂಬುದಾಗಿ ಏನು ಇತ್ತು, ಅದನ್ನು ಮುಂದುವರಿಸಿಕೊಂಡು ಹೋಗುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್. — ೧೦ ವರ್ಷಗಳ ವರೆಗೆ ಕೊಡಬೇಕಾಗಿಲ್ಲ ಎಂಬುದಾಗಿ ಈಗಾಗಲೇ ಹೇಳಿದ್ದೇನೆ.

ಶ್ರೀ ವಿ. ಧನಂಜಯ ಕುಮಾರ್.— ಈ ಸೌಲಭ್ಯ ಅಂದರೆ ೧೫೦-೨೫೦ ಎಂದು ಏನಿದೆ ಇದನ್ನು ಉಳಿಸಿಕೊಂಡು ಹೋಗುತ್ತೀರಾ ಎಂಬುದು ನನ್ನ ಪ್ರಶ್ನೆ, ಅದಕ್ಕೆ ವಿವರಣೆ ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.— ಇದರಲ್ಲಿ ಉಲ್ಲೇಖ ಏನಿದೆ ಅದರ ಬಗ್ಗೆ ನಾನು ಹೇಳುವುದಕ್ಕಾಗುವುದಿಲ್ಲ. ವಕೀಲರಿಗೆ ೧೦ ವರ್ಷಗಳವರೆಗೆ ಏನೂ ಕೊಡಬೇಕಾಗಿಲ್ಲವೆಂದು ವಿನಾಯಿತಿಯನ್ನು ತೋರಿಸಿದ್ದೇವೆ. ಆದರೆ ಸಂಬಳ ತೆಗೆದುಕೊಳ್ಳತಕ್ಕಂತವರಿಗೆ ತೊಂದರೆಯಾಗುತ್ತಿದೆ. ಅದನ್ನು ನಿವಾರಣೆ ಮಾಡುವುದಕ್ಕೋಸ್ಕರ ಅವರಿಗೆ ಈ ವಿನಾಯಿತಿಯನ್ನು ಕೊಟ್ಟಿರುವುದು. ೨೫೦ ರೂಪಾಯಿಂಗಳ

ಪರಿಗೆ ಎಂದು ಮಾಡಿದ್ದೇವೆ.

ಶ್ರೀ ವಿ. ಧನಂಜಯ ಕುಮಾರ್. — ಒಟ್ಟು ವರಮಾನ ಎಷ್ಟು ಇದ್ದಂತಹವರಿಗೆ ಈ ವಿನಾಯಿತಿ ಇದೆಯೇ ?

ಶ್ರೀ ಎ ಲಕ್ಷ್ಮೀಸಾಗರ್. — ಇದು ಸರ್ಕಾರದ ಯೋಚನೆ.

ಶ್ರೀ ವಿ. ಧನಂಜಯ ಕುಮಾರ್. — ಬೇರೆ ಆದಾಯ ವಿದ್ಯಾವಂತರಿಗೆ ಎರಡು ಕಡೆಯಿಂದ ಕಿರುಕುಳ. ಇದರಲ್ಲೂ ಕೂಡ ಕಿರುಕುಳವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್. — ತೆರಿಗೆಯನ್ನು ಕೊಡುವಾಗ ಕಿರುಕುಳ ಇಲ್ಲದೇ ಇರುವ ಸಮಯ ಇಲ್ಲ. ಕಾನೂನು ಸರಿಯಾಗಿದೆ. ಅದನ್ನು ಜನರಿಗೆ ತರುವುದರಲ್ಲಿ ಅನಾನುಕೂಲವಾಗುವ ರೀತಿಯಲ್ಲಿ ಆಗಲೇ ಇರುವಂತಹ ರೀತಿಯಲ್ಲಿ ಮಾಡುತ್ತೇವೆಂದು ನಾನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಭರವಸೆಯನ್ನು ಕೊಡುತ್ತೇನೆ. ಆಮೇಲೆ ಮುಖ್ಯವಾಗಿ ಇದನ್ನು ರದ್ದು ಮಾಡಬೇಕು ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಆಮೇಲೆ ಚುನಾವಣೆ ಪ್ರಣಾಳಿಕೆಯನ್ನೂ ಹೇಳಿದ್ದಾರೆ, ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಚುನಾವಣಾ ಪ್ರಣಾಳಿಕೆಯನ್ನು ೧೨ ತಿಂಗಳೊಳಗಾಗಿ ಮಾಡುತ್ತೇವೆಂದು ಹೇಳಿಲ್ಲ. ಯಾವ ಸರ್ಕಾರವೇ ಆಗಿರಲಿ ಆ ರೀತಿ ಬಂದ ತಕ್ಷಣ ಮಾಡುವುದಕ್ಕಾಗುವುದಿಲ್ಲ. ಆದರೆ ನಾವು ಕೊಟ್ಟಿರತಕ್ಕಂತಹ ಭರವಸೆಗಳನ್ನು ಹಂತ ಹಂತವಾಗಿ ಪೂರೈಕೆ ಮಾಡತಕ್ಕಂತಹ ಪ್ರಯತ್ನ ನಡೆದಿದೆ. ಈ ಒಂದು ದಿಸೆಯಲ್ಲಿ ನಾವು ರಿಯಾಯಿತಿಯನ್ನು ಕೊಟ್ಟಿದ್ದೇವೆ ಎನ್ನುವ ಮಾತನ್ನು ಅತಿ ವಿನಯದಿಂದ ಹೇಳುತ್ತೇನೆ. ನಾವು ಕೊಟ್ಟಂತಹ ಭರವಸೆಗೆ ೫ ವರ್ಷದ ಅವಧಿ ಇದೆ. ಯಾವ ಸರ್ಕಾರವೇ ಆಗಲಿ, ೫ ವರ್ಷದ ಅವಧಿಯಲ್ಲಿ ಮಾಡುತ್ತೇವೆ ಎನ್ನತಕ್ಕಂತಹ ಭರವಸೆಯನ್ನು ಕೊಡುತ್ತಾರೆ. ಆದರೆ ಬಂದ ತಕ್ಷಣ ಮಾಡಿರತಕ್ಕಂತಹ ಸರ್ಕಾರ ಯಾವುದಾದರೂ ಇದ್ದರೆ ತೋರಿಸಿಬಿಡಿ.

ಶ್ರೀ ಎಂ. ಸೂರ್ಯನಾರಾಣರಾವ್. — ಎಂಟಿನ ವರ್ಷ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್. — ನಾವು ಚುನಾವಣೆಯ ಸಮಯದಲ್ಲಿ ಜನರಿಗೆ ಕೊಟ್ಟಂತಹ ಭರವಸೆಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ ಈ ಈದಿಸೆಯಲ್ಲಿ ನಾಲ್ಕೂವರೆ ಲಕ್ಷ ಜನರಿಗೆ ಇದರಲ್ಲಿ ರಿಯಾಯಿತಿಯನ್ನು ನೀಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದೇನೆ. ಮುಂದೆ ಬರತಕ್ಕಂತಹದ್ದನ್ನು ಯಾರು ನೋಡಿರುತ್ತಾರೆ ಸ್ವಾಮಿ ? ಮುಂದೆ ನೋಡೋಣ. ನಮ್ಮ ಉದ್ದೇಶವನ್ನು ಸಫಲಗೊಳಿಸತಕ್ಕಂತಹ ದಾರಿಯಲ್ಲಿ ಹೋಗುತ್ತಿದ್ದೇವೆ. ಅದಕ್ಕೆ ಇದು ಒಂದು ನಿರ್ದಿಷ್ಟವಾದ ಉದಾಹರಣೆ. ಆದ್ದರಿಂದ ಇದಕ್ಕೆ ಮಾನ್ಯ ಸೂಸ್ಯರು ಮುಂಜೂರಾತಿಯನ್ನು ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

MR. CHAIRMAN.— I will put the consideration motion to the vote of the House. The question is :

> "That the Karnataka Tax on Professions, Trades Callings and Employments (Amendment) Bill, 1983 be taken into consideration."

The motion was adopted

CLAUSE BY CLAUSE CONSIDERATION

CLAUSE 2 TO 8

MR. CHAIRMAN,— As there are no amendments I will put clause 2 to 8 : both inclusive to the vote of the House,

The question is .

> "That Clause 2 to 8 both inclusive do stand part of the Bill."

The motion was adopted

Clauses 2 to 8 both inclusive were added to the Bill.

Clause 1 etc.,

MR. CHAIRMAN.—The question is :

"That Clause 1-, title, preamble and the enacting formula do stand part of the bill"

The motion was adopted

Clause 1, title preamble and the enacting formula were added to the bill.

Motion To Pass

MR. CHAIRMAN.—Hon'ble Minister may move the motion.

SRI A. LAKSHMISAGAR.—Sir, I beg to move :

"That the Karnataka Tax on Professions, Trades, Callings and Employments (Amendment) Bill, 1983 be passed."

MR CHAIRMAN, —The question is :

"That the Karnataka Tax on Professions, Trades, Callings and Employments (Amendment) Bill, 1983 be passed."

The Motion was adopted and the Bill was passed

The Karnataka Tax on Entry of goods int local Area for consumptieu, use or Sale Therein (Second Amendment Bill 1983.

Motion for Consideration

SRI A LAKSHMISAGAR.—I beg to move :

"That the Karnataka Tax on Entry of Goods into Local Area for Consumption, Use or Sale Therein (Second Amendment) Bill, 1983 be taken into consideration."

The question was prapased

ಶ್ರೀ ಎ. ಲಕ್ಷ್ಮೀಸಾಗರ್ : (ಕಾನೂನು ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿ ಮಸೂದೆ ಏನು ಇದೆ ಇದು ಬಹಳ ಸರಳವಾದುದು ಹಾಗೂ ಸುಲಭವಾದುದು ಏಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಇದರ ಬಗ್ಗೆ ವಿವರಣೆಯನ್ನು ಎಂಡಬೇಕಾದರೆ ಕ್ಲಾರಿಫಿಕೇಷನ್ ಮತ್ತು ಕ್ಲಾರಿಟಿ ಇನ್ ಕ್ಲಾರೆಕ್ಟರ್ ಏನು ಇದೆ ಇದರಿಂದ ಯಾರಿಗೇ ಆಗಲಿ ಹೊಸ ತೆರಿಗೆಯು ಬೀಳುವುದಿಲ್ಲ. ಇದರಲ್ಲಿ ಹೊಸ ಆದಾಯವೂ ಇಲ್ಲ ಏಂದೂ ಹೇಳುತ್ತೇನೆ. ಈ ತೆರಿಗೆಯನ್ನು ವಸೂಲ್ಮಾಡುವುದಕ್ಕೆ ಸ್ವಲ್ಪ ಸುಲಭವಾಗಿರಲಿ ಅನ್ನುವ ದೃಷ್ಟಿಯಿಂದ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದೇನೆ. ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇದರ ಜೊತೆಗೆ ಇನ್ನೊಂದು ತಿದ್ದುಪಡಿಯನ್ನೂ ಕೂಡ ಮಂಡನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದು ಈ ರೀತಿ ಇದೆ. —